ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Monday, the 12th June 1978/Jyeishta 22, 1900 S.E.

The House met in the Assembly Chamber, Vidhana Soudha, at One of the Clock.

[MR. SPEAKER (SRI P. VENKATARAMANA) in the Chair]

Obituary Reference

re : Demise of Sri K. Puttaswamy, M.L.A.

ಅಧ್ಯಕ್ಷರು.—ನಿಧನರಾದ ಕೆಳಕಂಡ ವ್ಯಕ್ತಿಗಳ ಬಗ್ಗೆ ಸಂತಾಪ ಸೂಚಿಸಲು ವಿಷಾದಿಸುತ್ತೇನೆ.

ದಿನಾಂಕ ೧-೪-೧೯೭೮ರಂದು ನಿಧನರಾದ ಈ ಸದನದ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿ ಅವರ ನಿಧನದ ಬಗ್ಗೆ ವಿಷಾದಿಸುತ್ತೇನೆ.

ಶ್ರೀ ಪುಟ್ಟಸ್ವಾಮಿಯವರು ೧೯೪೮ರಲ್ಲಿ ರಾಜ್ಯಾಂಗ ಸಭೆಯ ಸದಸ್ಯರಾಗಿದ್ದರು. ನಂತರ ೧೯೫೦ ರಿಂದ ೧೯೭೪ರ ವರೆಗಿನ ಅವಧಿಯಲ್ಲಿ ವಿಧಾನ ಸಭೆಯ ಸದಸ್ಯರಾಗಿ ಕಾನೂನು ಮಂತ್ರಿಯಾಗಿ ನಗರಾಡಳಿತ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಅವರು ಶಾಸನ ಸಭೆಯ ಅತ್ಯಂತ ಹಿರಿಯ ಸದಸ್ಯರಲ್ಲಿ ಒಬ್ಬರಾಗಿದ್ದರು. ಸಮಾಜ ಶಾಸನ ರಚನೆ, ಆತಿ ಮುಖ್ಯವಾಗಿ ಭೂಸುಧಾರಣೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಈ ಆರನೇ ವಿಧಾನಸಭೆಯಲ್ಲಿ ಜನತಾ ಪಕ್ಷದ ಗಣ್ಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು.

ಮಾಜಿ ವಿಧಾನ ಸಭೆಯ ಸದಸ್ಯರಾದ ಶ್ರೀ ಜಂಬಣ್ಣ ಅವರು ದಿನಾಂಕ ೨೬-೫-೧೯೭೮ ರಂದು ನಿಧನರಾದರು. ಶ್ರೀ ಜಂಬಣ್ಣನವರು ೧೯೫೭—೧೯೬೨ರ ಅವಧಿಯ ವಿಧಾನಸಭೆಯ ಸದಸ್ಯರಾಗಿದ್ದರು

ಹಿಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಜಿ. ವಿ. ನರಸಿಂಗಪ್ಪನವರು ದಿನಾಂಕ ೬-೫-೧೯೭೮ರಂದು ನಿಧನರಾದರು.

ಮಾಜಿ ಉಪ ಮಂತ್ರಿ ಶ್ರೀ ಬಸವರಾಜ ಮಾಗಾವಿ ಅವರು ದಿನಾಂಕ ೭-೬-೧೯೭೮ ರಂದು ನಿಧನ ರಾದರು. ಶ್ರೀ ಬಸವರಾಜ ಮಾಗಾವಿಯವರು ೧೯೬೨ ರಿಂದ ವಿಧಾನಸಭೆಯ ಸದಸ್ಯರಾಗಿದ್ದರು. ೧೯೬೮ ರಿಂದ ೧೯೭೧ರ ವರೆಗೆ ಉಪಮಂತ್ರಿ ಕೂಡ ಆಗಿದ್ದರು.

ಶ್ರೇಯುತರುಗಳಾದ ಕೆ. ಪುಟ್ಟಸ್ವಾಮಿ, ಜಂಬಣ್ಣ, ನರಸಿಂಗಪ್ಪ ಮತ್ತು ಬಸವರಾಜ ಮಾಗಾವಿ ಅವರುಗಳ ನಿಧನದ ಬಗ್ಗೆ ಸಂತಾಪ ಸೂಚಿಸುವಲ್ಲಿ ಮತ್ತು ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆಯ ಸಂತಾಪವನ್ನು ವ್ಯಕ್ತಪಡಿಸುವಲ್ಲಿ ನನ್ನೊಡನೆ ಭಾಗವಹಿಸಬೇಕೆಂದು ಕೋರುತ್ತೇನೆ.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಸಭಾಪತಿಗಳೇ, ತಾವು ವ್ಯಕ್ತ ಮಾಡಿದ ಭಾವನೆಗಳಲ್ಲಿ ನಾನೂ ಪಾಲುಗೊಳ್ಳುತ್ತೇನೆ, ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಈ ಸಭೆ

† indicate that remarks or speeches have not been revised by the member concerned.

ಯಲ್ಲಿ ಅತ್ಯಂತ ಹೆಚ್ಚು ಅವಧಿಯವರೆಗೆ ಸದಸ್ಯರಾಗಿದ್ದ ಇಬ್ಬರು ಸದಸ್ಯರಲ್ಲಿ ಒಬ್ಬರು. ಮಾನ್ಯ ದೇವರಾಜ ಅರಸ್ ಅವರು ಮತ್ತು ಪುಟ್ಟಸ್ವಾಮಿಯವರು ಹೆಚ್ಚು ಅವಧಿಯವರೆಗೆ ಈ ಸಭೆಯಲ್ಲಿ ಸದಸ್ಯರಾಗಿದ್ದರು. ಮಾನ್ಯ ಪುಟ್ಟಸ್ವಾಮಿಯವರು ೧೯೪೪ ರಿಂದ ಸತತವಾಗಿ ಶಾಸಕರಾಗಿ ೧೯೭೮ರಲ್ಲಿ ಒಳ್ಳೆಯ ಹೆಸರು ಪಡೆದಂಥ ವ್ಯಕ್ತಿಗಳಾಗಿದ್ದರು. ಶ್ರೀಮಾನ್ ಪುಟ್ಟಸ್ವಾಮಿಯವರ ಬಗ್ಗೆ ಮಾತನಾಡುವಾಗ ನಾನು ಎರಡು ಮಾತುಗಳನ್ನು ಹೇಳಬೇಕೆಂದರೆ, ಅವರು ಒಬ್ಬ ಆದರ್ಶ ಸಮಾಜ ಸೇವಕರು, ರಾಜಕಾರಣಿಗಳು, ನೀತಿವಂತರು, ನಿಷ್ಪಾವಂತರು ಆಗಿದ್ದರು. ಅಂಥ ಒಬ್ಬ ಗಣ್ಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಮಾನ್ಯ ಪುಟ್ಟಸ್ವಾಮಿಯವರು ಶಾಸಕರಾಗಿ, ಮಂತ್ರಿಗಳಾಗಿ ಹಾಗೂ ಮೈಸೂರು ನಗರಸಭೆಯ ಅಧ್ಯಕ್ಷರಾಗಿ ವಿವಿಧ ರಂಗಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಸಮಾಜಕ್ಕೆ ಅನೇಕ ಕಾರ್ಯಕ್ಷೇತ್ರಗಳ ಮುಖೇನ ಸೇವೆಯನ್ನು ಸಲ್ಲಿಸಿದಂಥ ಒಬ್ಬ ಮಹಾನ್ ವ್ಯಕ್ತಿ. ಅವರ ಜಾಣ್ಮೆ, ಅವರ ವಿದ್ವತ್‌ನಲ್ಲಿ ಅವರು ಎಂದೂ ಮದಾಂಧತೆಯನ್ನು ತೋರಲಿಲ್ಲ. ಎಷ್ಟೇ ಕಷ್ಟ ಪ್ರಸಂಗದಲ್ಲಿಯೂ ಕೂಡ ತಮ್ಮ ಸಮಾಧಾನವನ್ನು ಕಳೆದುಕೊಳ್ಳದೆ ಮೃದುತ್ವದಿಂದ ತಮ್ಮ ವಾದವನ್ನು ಬಹಳ ಜಿಗಟಿನಿಂದ ಹೇಳಿದಂಥ ಶಾಸಕರು. ಶ್ರೀಮಾನ್ ಪುಟ್ಟಸ್ವಾಮಿಯವರು ನನಗೆ ವೈಯಕ್ತಿಕವಾಗಿ ಮಾರ್ಗದರ್ಶನ ಮಾಡಿದಂಥ ಒಬ್ಬ ನಾಯಕರು. ಅವರು ಜನತಾಪಕ್ಷದಲ್ಲಿ ಕೂಡ, ಇಲ್ಲಿ ವಿರೋಧಪಕ್ಷದವರಾಗಿ ನಮಗೆಲ್ಲಾ ಮಾರ್ಗದರ್ಶನ ಮಾಡಿದ್ದಾರೆ. ಅವರ ಅಗಲುವಿಕೆಯಿಂದ ಜಟಿಲ ಸಮಸ್ಯೆಗಳು ಬಂದಾಗ ಅವರಿಂದ ಬರತಕ್ಕ ಬೆಳಕು ಇಲ್ಲದಂತಾಗಿದೆ. ನಮಗೆ ಅಷ್ಟೇ ಅಲ್ಲ. ಈ ಸಭೆಗೆ ಒಂದು ಮಾರ್ಗದರ್ಶನ ಮಾಡತಕ್ಕ ನಾಯಕನನ್ನು ನಾವು ಕಳೆದುಕೊಂಡಿದ್ದೇವೆ. ಅವರಿಗೆ ಗೌರವವನ್ನು ವ್ಯಕ್ತ ಮಾಡತಕ್ಕ ಭಾವನೆಯಲ್ಲಿ ನಾನೂ ಪಾಲುಗೊಳ್ಳುತ್ತೇನೆ. ಇವರ ಜೊತೆಗೆ ಮಾನ್ಯ ಸದಸ್ಯರಾಗಿದ್ದ ಜಂಬಣ್ಣನವರು ಶ್ರೀಮಾನ್ ನರಸಿಂಗಪ್ಪನವರು ಅದೇ ರೀತಿಯಲ್ಲಿ ಮಾನ್ಯ ಬಸವರಾಜ ಮಾಗಾವಿಯವರು ಅಕಾಲ ಮರಣಕ್ಕೆ ತುತ್ತಾಗಿದ್ದಾರೆ. ಮಾನ್ಯ ಜಂಬಣ್ಣನವರ್ ಮತ್ತು ನರಸಿಂಗಪ್ಪನವರ ಪರಿಚಯ ನನಗಿಲ್ಲ. ಆದರೆ ಮಾನ್ಯ ಮಾಗಾವಿಯವರು ನನ್ನ ಒಬ್ಬ ಮಿತ್ರರು ೧೯೪೨ ರಿಂದ ೧೯೭೧ರ ವರೆಗೆ ಈ ಸಭೆಯ ಸದಸ್ಯರಾಗಿದ್ದು ಮಾನ್ಯ ವೀರೇಂದ್ರ ಪಾಟೀಲ್ ಅವರ ಮಂತ್ರಿ ಮಂಡಲದಲ್ಲಿ ಉಪ ಮಂತ್ರಿಗಳಾಗಿದ್ದರು. ಹಾವೇರಿ ನಗರದ ಒಂದು ಗಣ್ಯ ವ್ಯಾಪಾರಿ ಮನೆತನದಲ್ಲಿ ಹುಟ್ಟಿ ಬೆಳೆದು ವಿದ್ಯಾವಂತರಾದ ಮಾಗಾವಿಯವರು ಸಮಾಜಸೇವೆಗೆ ಚಿಕ್ಕ ವಯಸ್ಸಿನಲ್ಲಿಯೇ ತಮ್ಮನ್ನು ಅರ್ಪಿಸಿಕೊಂಡು ವಿವಿಧ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದರು. ಇವರು ಅಕಸ್ಮಾತ್ ದುರ್ಘಟನೆಗೆ ಸಿಕ್ಕಿ ಮೃತರಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ಹೇಳಿ ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇಂದು ತಮ್ಮ ಮುಖೇನ ಈ ಸಭೆಯ ಮುಂದೆ ಇರತಕ್ಕ ಸಂತಾಪಸೂಚಕ ನಿರ್ಣಯವನ್ನು ಅನುಮೋದಿಸಿ, ಸಭೆಯ ಸದಸ್ಯರಾಗಿದ್ದ ಹಾಗೂ ಜೊತೆಯಲ್ಲಿ ಕೆಲಸ ಮಾಡಿದಂಥ ಮಾನ್ಯ ಪುಟ್ಟಸ್ವಾಮಿಯವರ ಅಗಲುವಿಕೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಶ್ರೀಯುತ ಪುಟ್ಟಸ್ವಾಮಿಯವರು ನನಗೆ ಸುಮಾರು ೧೯೫೦ನೇ ಇಸವಿಯಿಂದ ಪರಿಚಯಸ್ಥರು. ಅಷ್ಟೇ ಅಲ್ಲ ಸಮ್ಮ ಶಾಸನಸಭೆಯಲ್ಲಿ ಅವರೂ ನಾನೂ ಒಂದೇ ಸಮನೆ ೨೫ ವರ್ಷಗಳ ಮೇಲೆ ಸದಸ್ಯರಾಗಿ ಕೆಲಸ ಮಾಡತಕ್ಕ ಒಂದು ಅವಕಾಶ ಇತ್ತು. ೨೫ ವರ್ಷಗಳಿಂದ ಒಂದೇ ಸಮನೆ ಇದೇ ಶಾಸನಸಭೆಗೆ ಚುನಾಯಿತರಾಗಿದ್ದವರೆಂದರೆ ಶ್ರೀಮಾನ್ ಪುಟ್ಟಸ್ವಾಮಿಯವರು. ನನಗೆ ತಿಳಿದಂತೆ ಅವರ ಹೊರತು ಇನ್ನು ಯಾರೂ ಇರಲಿಲ್ಲ, ೧೯೪೮—೪೯ರಲ್ಲಿ ಹಳೆಯ ಮೈಸೂರು ಭಾಗದಲ್ಲಿ ಕಾನ್ಸ್ಟಿಟ್ಯೂಯಂಟ್ ಅಸೆಂಬ್ಲಿ ಎಂದು ಹೇಳಿ ರಾಜ್ಯಾಂಗ ಸಭೆ ಸ್ಥಾಪನೆ ಮಾಡಿದಾಗ ಅದಕ್ಕೆ ಶ್ರೀ ಮಾನ್ ಪುಟ್ಟಸ್ವಾಮಿಯವರು ಸದಸ್ಯರಾಗಿ ಬಂದರು. ಆಗಿನ ಅವರ ಸದಸ್ಯರ ಪೈಕಿ ಇವರೇ ಎಲ್ಲರಿಗಿಂತ ಚಿಕ್ಕವಯಸ್ಸಿನವರಾಗಿದ್ದರು. ಅವರು ಲಾಯರ್ ಕೆಲಸ ಮಾಡಿದ್ದ ವಿಚಾರ ನನಗೆ ಗೊತ್ತಿಲ್ಲ. ಆದರೆ ಅವರು ಶಾಸಕರಾಗಿ ಹಾಗೂ ರಾಜಕಾರಣಿಯಾಗಿ ಕೆಲಸ ಮಾಡಿದ್ದು ಪೂರ್ಣವಾದ ಪರಿಚಯ ಎಲ್ಲ ಕಾಲದಲ್ಲೂ ನನಗೆ ಇತ್ತು. ಅವರು ಈ ಶಾಸನಸಭೆಯಲ್ಲಿ ತುಂಬಾ ಅರಿತಂತಹ ಹಾಗೂ ನುರಿತಂತಹ ಶಾಸಕರಾಗಿದ್ದರು. ಮಂತ್ರಿಗಳಾಗಿಯೂ ಸಹ ಅವರು ಕೆಲಸ ಮಾಡಿದ್ದರು. ಅವರಲ್ಲಿ ನಾನು ಒಂದು ವಿಶೇಷವಾದಂಥ ಗುಣ ನೋಡಿದ್ದು ಎಂದರೆ, ಯಾವುದೇ ಒಂದು ಸಮಸ್ಯೆ ಬರಲಿ, ಎಷ್ಟೇ ಜಿಜ್ಞಾಸೆ ಬರಲಿ, ಅದನ್ನು ಬಹಳ ಸಮಾಧಾನದಿಂದ ಬಗೆಹರಿಸುವುದಕೆ ಪ್ರಯತ್ನ ಮಾಡುತ್ತಿದ್ದರು. ಅವರು ಎಂದೂ ಉದ್ವೇಗ ಪಟ್ಟವರಲ್ಲ. ಮತ್ತೆ ಪ್ರಜಾಪ್ರಭುತ್ವದ

ರೀತ್ಯಾ ಎಷ್ಟೇ ಭಿನ್ನಾಭಿಪ್ರಾಯ ಬಂದರೂ ಸಹ ಆ ಒಂದು ಭಿನ್ನಾಭಿಪ್ರಾಯದ ಆಧಾರದಿಂದ ಅವರ ಮನಸ್ಸಿನಲ್ಲಿ ಯಾವುದೇ ಕಿರಿಕಿರಿಯನ್ನು ಇಟ್ಟುಕೊಂಡು ಹಠ ಸಾಧನೆಯನ್ನಾಗಲಿ. ದ್ವೇಷ ಸಾಧನೆಯನ್ನಾಗಲೀ ಮಾಡುವ ಗುಣ ಅವರಲ್ಲಿರಲಿಲ್ಲ. ಈ ಒಂದು ವಿಶೇಷ ಗುಣವನ್ನು ನಾನು ಅವರಲ್ಲಿ ನೋಡಿದ್ದು. ಮತ್ತೆ ಈ ಸಲದ ಚುನಾವಣೆಯಲ್ಲಿ ಅವರು ಆರಿಸಿ ಬರುವುದಿಲ್ಲವೆಂಬ ಮಾತನ್ನು ನಾನು ಎಷ್ಟೋ ಸಾರಿ ಕೇಳಿದ್ದೆ. ಆದರೆ ಅವರ ಬಗ್ಗೆ ಜನರಲ್ಲಿ ಏನು ವಿಶ್ವಾಸವಿತ್ತು ಎಂಬುದು ಚುನಾವಣೆಯ ಫಲಿತಾಂಶ ಹೊರಬಿದ್ದ ಮೇಲೆ ಗೊತ್ತಾಯಿತು. ಎಂದೂ ಅವರು ಯಾವ ವಿಷಯದಲ್ಲಿಯೂ ಇತರೆಯವರನ್ನು ನಿಂದನೆ ಮಾಡಿ ದ್ವೇಷ ಸಾಧಿಸುತ್ತಿರಲಿಲ್ಲ. ಈ ಶಾಸನ ಸಭೆಯಲ್ಲಿ ಯಾವುದೇ ಕಠಿಣ ಸಮಸ್ಯೆ ಬಂದರೂ ಸಹ ಆ ಸಮಸ್ಯೆಯ ಇನ್ನೊಂದು ಮುಖ ಏನಿದೆ ಎಂಬುದನ್ನು ಅರ್ಥಪೂರ್ಣವಾಗಿ ಅಭ್ಯಾಸ ಮಾಡಿ ಅವರು ಮಾತನಾಡುತ್ತಿದ್ದರು. ಅಷ್ಟೇ ಅಲ್ಲ, ಯಾವುದಾದರೂ ಒಂದು ಸನ್ನಿವೇಶ ಉಲ್ಬಣಾವಸ್ಥೆಗೆ ಹೋದರೆ, ಅಂತಹ ಸನ್ನಿವೇಶವನ್ನು ಸೌಮ್ಯಕ್ಕೆ ತರಲು ಅವರು ಸರ್ವ ಪ್ರಯತ್ನ ಮಾಡುತ್ತಿದ್ದರು. ಉಲ್ಬಣಾವಸ್ಥೆಯ ಯಾವುದೇ ಮಾತಿನಲ್ಲಿ ಅವರು ಭಾಗಿಯಾಗುತ್ತಿರಲಿಲ್ಲ. ಪ್ರಜಾಪ್ರಭುತ್ವದಲ್ಲಿ ವಾದವಿವಾದಗಳು, ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ಆದ್ದರಿಂದ ನಾವು ಒಟ್ಟಿಗೆ ಸೇರಿ ಕೆಲಸ ಮಾಡಬೇಕೆಂಬ ಒಂದು ನಿಶ್ಚಲ ಮನೋಭಾವವನ್ನು ಅವರು ಬೆಳೆಸಿಕೊಂಡು ಬಂದಿದ್ದರು. ಹಿಂದಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟದಲ್ಲಿ ಅವರು ಯುವಕರಾಗಿ ಭಾಗಿಯಾಗಿದ್ದವರು. ಯಾವುದೇ ಪಕ್ಷದಲ್ಲಿರಲಿ. ರಾಜಕೀಯವಾಗಿ ಹಾಗೂ ಮೂಲಭೂತವಾಗಿ ಕೆಲವು ಮೌಲ್ಯಗಳನ್ನು ಕಾಪಾಡಿಕೊಂಡು ಹೋಗಬೇಕೆಂಬ ನಂಬಿಕೆಯನ್ನು ಅವರು ಹೊಂದಿದ್ದರು. ಅಂತಹವರು ಇಂದು ಈ ರೀತಿಯ ಅನಿರೀಕ್ಷಿತವಾದಂಥ ಒಂದು ದುರ್ಘಟನೆಗೆ ತುತ್ತಾದುದು ಮತ್ತು ಅವರ ಸಾವಿನಿಂದ ನಮಗೆಲ್ಲರಿಗೂ ತುಂಬಾ ನಷ್ಟವಾಗಿದೆ. ಹಾಗೂ ನಮ್ಮ ಶಾಸನಸಭೆಗೆ ಅಪಾರ ನಷ್ಟ ಉಂಟಾಗಿದೆ. ಇಂತಹ ಅನುಭವಿ ಶಾಸಕರು ನಮ್ಮ ಜೊತೆಯಲ್ಲಿ ಇನ್ನೂ ಬಹಳ ಕಾಲ ಇದ್ದಿದ್ದರೆ, ಅದರಿಂದ ನಮಗೆ ಅನುಕೂಲವಾಗುತ್ತಿತ್ತು ಎಂದು ನಾನು ನಿಜವಾಗಿಯೂ ನಂಬುತ್ತೇನೆ. ಅವರ ಒಂದು ದುರ್ಮರಣದಿಂದ ಉಂಟಾಗಿರತಕ್ಕಂಥ ತೆರವನ್ನು ತುಂಬುವುದು ಕಷ್ಟವೆಂದು ನಾನು ಭಾವಿಸಿದ್ದೇನೆ. ಈ ವಿಚಾರದಲ್ಲಿ ನಾನು ತಮ್ಮ ಮೂಲಕ ನನ್ನ ಮಾತನ್ನು ಜೋಡಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಅದೇ ರೀತಿ ಶ್ರೀ ಜಂಬಣ್ಣ ಅವರ ಪರಿಚಯ ನನಗಿತ್ತು. ಹಿಂದೆ ಚಿತ್ರದುರ್ಗದಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಕೆಲವು ವರ್ಷಗಳ ಕಾಲ ಕೆಲಸ ಮಾಡಿದ್ದರು. ಶಾಸನಸಭೆಯ ಸದಸ್ಯರಾಗಿಯೂ ಸಹ ಒಂದು ಅವಧಿ ಕೆಲಸ ಮಾಡಿದ್ದರು. ಅವರು ತುಂಬಾ ಆದರ್ಶವಾದಿಗಳು ಹಾಗೂ ಹಠವಾದಿಗಳೂ ಆಗಿದ್ದರು ಅವರೂ ಕೂಡ ನಿಧನರಾಗಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಕೋರುವುದು ನನ್ನ ಕರ್ತವ್ಯವಾಗಿದೆ.

ಅದೇರೀತಿ ಶ್ರೀ ಮಾಗಾವಿ ಅವರು ಚಿಕ್ಕ ವಯಸ್ಸಿನವರಾಗಿದ್ದರು. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರ ನಾಯಕತ್ವದಲ್ಲಿ ಅವರು ಶಾಸಕರಷ್ಟೇ ಅಲ್ಲ, ಉಪಮಂತ್ರಿಗಳಾಗಿಯೂ ಕೆಲಸ ಮಾಡಿದ್ದರು. ಅವರು ಇಷ್ಟು ಚಿಕ್ಕ ವಯಸ್ಸಿನಲ್ಲಿ ಮರಣ ಹೊಂದಿದ್ದು ನಮಗೆಲ್ಲರಿಗೂ ದುಃಖವಾಗಿದೆ. ಇದು ಒಂದು ನಿಜವಾಗಿಯೂ ಅಕಾಲ ಮರಣವೆಂದು ಹೇಳಬೇಕು. ಅವರು ಶಾಸಕರಾಗಿದ್ದಾಗ ಮತ್ತು ಮಂತ್ರಿಗಳಾಗಿದ್ದಾಗ ಎಲ್ಲರೊಡನೆ ಹೊಂದಿಕೊಂಡು ಒಳ್ಳೆಯ ಅನ್ಯೋನ್ಯತೆಯಿಂದ ಕೆಲಸ ಮಾಡಿಕೊಂಡು ಬಂದಿದ್ದರು.

ಅದೇರೀತಿ ಶ್ರೀ ನರಸಿಂಗಪ್ಪನವರ ಮರಣದ ವರದಿಯೂ ಸಹ ನಮಗೆ ದುಃಖ ಉಂಟು ಮಾಡಿದೆ. ಇವರೆಲ್ಲರ ಆತ್ಮಕ್ಕೂ ಶಾಂತಿ ಕೋರಿ, ತಾವು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಈ ಸಂತಾಪ ಸೂಚಕ ಠರಾವಿಗೆ ನನ್ನ ಪೂರ್ಣ ಅನುಮೋದನೆಯನ್ನು ವ್ಯಕ್ತಪಡಿಸುತ್ತೇನೆ.

ಅಧ್ಯಕ್ಷರು.—ತಾವೆಲ್ಲರು ಎರಡು ನಿಮಿಷ ಎದ್ದು ನಿಂತು ಮೌನವನ್ನಾಚರಿಸುವ ಮೂಲಕ ದಿವಂಗತರಿಗೆ ಗೌರವವನ್ನು ಸೂಚಿಸಬೇಕೆಂದು ಕೋರುತ್ತೇನೆ,

(The House stood in silence for Two Minutes)